**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಟಿ.ನರಸೀಪುರ</u>**

<u>ದಿನಾಂಕ 23 ನೇ ಫೆಬ್ರವರಿ 2026</u>

**<u>ಸಿ.ಸಿ. 485/2026</u>**

ಪಿರ್ಯಾದುದಾರರುಃ ರಾಜ್ಯದ ಪರ ಬನ್ನೂರು ಪೊಲೀಸರು

ವಿರುದ್ಧ

ಆರೋಪಿಃ ಜೊಹರ್ ಖಾನ್ @ ಜೊಹರ್,
ಬಿನ್ ಲೇಟ್ ಅಲಿ ಖಾನ್, 44 ವರ್ಷ,
ವಾಸಃ ನಂ.15/165, ವಾರ್ಡ್ ನಂ.15,
ಬಿಸ್ಮಿಲ್ಲಾ ನಗರ, ಬನ್ನೂರು ಟೌನ್,
ಟಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

**<u>ಆರೋಪಣೆ</u>**

**ಶ್ರೀ ಸಚಿನ್ ಹೆಚ್.ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಟಿ.ನರಸೀಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಣೆಯನ್ನು ಮಾಡುತ್ತೇನೆ.**

ದಿನಾಂಕ 13.02.2026 ರಂದು ಸಂಜೆ 7.25 ಗಂಟೆ ಸಮಯದಲ್ಲಿ ಬನ್ನೂರು ಠಾಣಾ ವ್ಯಾಪ್ತಿಯ ಬನ್ನೂರು ಟೌನ್, ಎಸ್.ಆರ್.ಪಿ ರಸ್ತೆಯಲ್ಲಿರುವ ರತ್ನ ಮಹಲ್ ಚಿತ್ರ ಮಂದಿರ ಮುಂಭಾಗದಲ್ಲಿ ಆರೋಪಿಯಾದ ನೀವು ಕೈಯಲ್ಲಿ ಲಾಟರಿಗಳನ್ನು ಹಿಡಿದುಕೊಂಡು ಮಾರಾಟ ಮಾಡಲು ಸಾರ್ವಜನಿಕರಿಗೆ ತೋರಿಸುತ್ತಿದ್ದು, ನಿಮ್ಮನ್ನು ಹಿಡಿದು ನಿಮ್ಮ ಬಳಿ ಇದ್ದ ಲಾಟರಿಗಳನ್ನು ನೋಡಲಾಗಿ ಅವು ಕೇರಳ ರಾಜ್ಯದ ಲಾಟರಿಗಳಾಗಿದ್ದು ಒಟ್ಟು 33 ಲಾಟರಿ ಕಟ್ಟುಗಳು ಇರುತ್ತವೆ. ಪ್ರತಿಯೊಂದು ಕಟ್ಟಿನಲ್ಲಿಯೂ 12 ಲಾಟರಿಗಳಂತೆ ಒಟ್ಟು 396 ಲಾಟರಿಗಳಿದ್ದು, ಪ್ರತಿಯೊಂದು ಲಾಟರಿಯಾ ಬೆಲೆ 50 ರೂಗಳಾಗಿದ್ದು ಅವುಗಳ ಒಟ್ಟು ಮೌಲ್ಯ 6,300-00 ರೂಗಳಾಗಿರುತ್ತದೆ. ರಾಜ್ಯದಲ್ಲಿ ಲಾಟರಿ ನಿಷೇದವಿದ್ದರೂ ಆರೋಪಿಯಾದ ನೀವು ಕೇರಳ ರಾಜ್ಯದಿಂದ ಲಾಟರಿಗಳನ್ನು ತಂದು ಇಲ್ಲಿ ಮಾರಾಟ

ಮಾಡುತ್ತಿದ್ದು, ಆ ಮೂಲಕ ಲಾಟರಿ ರೆಗ್ಯುಲೇಷನ್ ಆಕ್ಟ್ ಅನ್ನು ಉಲ್ಲಂಘಿಸಿದ್ದು ಕಲಂ.7(iii) ರನ್ವಯ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

**(ಮೇಲ್ಕಂಡ ಆರೋಪಗಳ ಬಗ್ಗೆ ಆರೋಪಿಯಾದ ನೀವು ಈ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಾನು ನಿರ್ದೇಶಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಟಿ.ನರಸೀಪುರ.**

## ಆರೋಪಿಯ ಹೇಳಿಕೆ

ಪ್ರಶ್ನೆ-1 ಈಗ ಓದಿ ಹೇಳಿದ ಆರೋಪಣೆಯನ್ನು ಅರ್ಥ ಮಾಡಿಕೊಂಡಿರಾ ?

ಉತ್ತರಃ

ಪ್ರಶ್ನೆ-2 ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರಃ

**(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದು ಕೊಂಡಿದ್ದು ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಟಿ.ನರಸೀಪುರ.**

ಆರೋಪಿಯ ಸಹಿಃ